**ವ್ಯಾಖ್ಯಾನ** Date: 10.06.2025

# <u>ಶ್ರವಣದಿಂದ ಹೋಯಿತು ಬ್ರಹ್ಮಹತ್ಯಾ ಪಾಪ</u>

ಉಗಾಭೋಗದ ಚಿಂತನೆ:

**ಶ್ರವಣದಿಂದ ಹೋಯಿತು ಬ್ರಹ್ಮಹತ್ಯಾ ಪಾಪ**
**ಸ್ಮರಣೆಯಿಂದ ಹೋಯಿತು ಸೇರಿದ್ದ ಪಾಪವು**
**ಎಲ್ಲಿದ್ದ ಅಜಮಿಳ ಎಲ್ಲಿತ್ತು ವೈಕುಂಠ**
**ಕೊಟ್ಟಾತನೆ ಬಲ್ಲ ಪುರಂದರ ವಿಠಲ**

ದಾಸರ ಮಾತುಗಳು ಅರ್ಥವಾಗಬೇಕಾದರೆ, ಸಕಲ ಶಾಸ್ತ್ರಗಳ ಅಧ್ಯನವಾಗಿರಬೇಕು. ಅದಕ್ಕಾಗಿಯೆ ಸುಧಾ ಓದಿ ಪದ ಹೇಳು ಎನ್ನುವ ಗಾದೆ ಹೊರಟಿದೆ.

ಈ ಉಗಾಭೋಗದ ಮೊದಲ ಸಾಲುಗಳು ಓದಿದವರಿಗೆ ಶ್ರವಣ, ಸ್ಮರಣ ಮಾಡಿದವರಿಗೆ ಬ್ರಹ್ಮಹತ್ಯಾದಿ ಪಾಪಗಳು ಪರಿಹಾವಾಗುತ್ತವೆ ಎಂದಿದೆ.
ಬ್ರಹ್ಮಹತ್ಯಾ ಸಿರಸ್ಕಂಚ ಎಂಬಂತೆ ಪಾಪಪುರುಷನ ಶಿರಸ್ಸು ಬ್ರಹ್ಮಹತ್ಯೆ. ಅದಕ್ಕೆ ಸಮನಾದ ಅಮಂಗಲವಿಲ್ಲ.

ಆದರೆ ಕೊನೆಯ ಸಾಲು,

**"ಎಲ್ಲಿದ್ದ ಅಜಾಮಿಳ, ಎಲ್ಲಿತ್ತು ವೈಕುಂಠ, ಕೊಟ್ಟಾತನೆ ಬಲ್ಲ, ಪುರಂದರ ವಿಟ್ಠಲ"** ಎನ್ನುತ್ತ ಈ ಪಾಪಗಳು ಅಷ್ಟು ಸರಳವಾಗಿ ಹೋಗಲಾರವೋ ಏನೋ ಎನಿಸುತ್ತವೆ. ಅಲ್ಲವೆ?
ಹೌದು
ಪಂಚ ಪಾತಕ ಮಾಡಿದವರಿಗೆ ಘೋರ ನರಕ ನಿಶ್ಚಿತ.

ಆದರೆ,

ಇಂಥಾ ಪಾಪಗಳು, ಪ್ರಾರಬ್ಧ ವಶದಿಂದ ಸುಜೀವಿಗಳಿಂದ (ಜೀವಿಯ ಸ್ವರೂಪ ಸಾತ್ವಿಕವಾಗಿದ್ದರೆ) ಘಟಿಸಿದರೆ, ಅವರು ಪ್ರಾಯಶ್ಚಿತ್ತಾದಿಗಳಿಂದ ಶುದ್ಧರಾಗಿ ಮತ್ತೆ ಸಾಧನ ಮಾಡಿಕೊಂಡು ತಮ್ಮ ನಿಜ ಗತಿಯನ್ನು ಹೊಂದುತ್ತಾರೆ, ಎನ್ನುವುದು. ಅಜಾಮಿಳ ಮತ್ತು ವೆಂಕಟೇಶ ಮಹಾತ್ಮೆಯಲ್ಲಿ ಬರುವ ಮಾಧವ ಬ್ರಾಹ್ಮಣ ಮುಂತಾದವರ ಉದಾಹರಣೆಗಳನ್ನು ಶ್ರೀ ವೇದವ್ಯಾಸರು ತಿಳಿಸುತ್ತಾರೆ. ಅಲ್ಲಿಯೂ ಕೂಡ ಹೀಗೆಯೇ ಹರಿ ಸ್ಮರಣೆಯಿಂದ ಉದ್ಧಾರವಾದರು ಎಂದು ಹೇಳಿರುತ್ತಾರೆ. ಅವುಗಳ ತಾತ್ಪರ್ಯವನ್ನು ಉಳಿದ ಪುರಾಣೇತಿಹಾಸಗಳ ಆಧಾರದಿಂದ ನಿರ್ಣಯಿಸಿ ಹೇಳಿದ ನಿರ್ಣಾಯಕ ಗ್ರಂಥಗಳಾದ ಭಾಗವತ, ಮಹಾಭಾರತ, ತಾತ್ಪರ್ಯನಿರ್ಣಯಗಳನ್ನು ಆಧರಿಸಿ ಅರ್ಥ ತಿಳಿಬೇಕು.
ಇಲ್ಲಿ ಅಜಾಮಿಳ ಸಾತ್ವಿಕ ಜೀವಿ. ಪಾಪ ಕರ್ಮದ ಪ್ರಾಯಶ್ಚಿತ್ತ ಮಾಡಿಕೊಂಡು, ಸಾಧನೆ ಮಾಡಿ ಉದ್ಧಾರವಾದನು.

ಮತ್ತು ಪುರಾಣಗಳಲ್ಲಿ ಅನೇಕ ಮೋಹಕ ವಾಕ್ಯಗಳು ಇರುತ್ತವೆ. ಅವುಗಳನ್ನು ಅಸುರ ಜನ ಮೋಹನಕ್ಕಾಗಿ ಹೇಳಿರುತ್ತಾರೆಂದು ತಿಳಿಯಬೇಕು.

ಉದಾ :-- ಸ್ಕಾಂದ ಪುರಾಣದಲ್ಲಿ ಇಂದ್ರ ದೇವರು ವಿಶ್ವರೂಪಾಚಾರ್ಯರನ್ನು, ಮತ್ತು ವೃತ್ರಾಸುರನ್ನು ಕೊಂದಾಗ ಬ್ರಹ್ಮಹತ್ಯಾ ದೋಷ ಬಂದಿತು. ಅದಕ್ಕೆ ಕಾರಣವೇನೆಂದರೆ ಇಂದ್ರ ದೇವರು ಇಂಥಾ ಕರ್ಮ ಮಾಡಲು ಅವರು ಅಹಲ್ಯಾ ಗಮನ ಮಾಡಿದ ದೋಷ ಎಂದಿದೆ.
ಇದು ಮೋಹಕ ವಾಕ್ಯ ಇದರ ತಾತ್ಪರ್ಯ ಹೀಗಿದೆ.
ಅಹಲ್ಯಾ ಗಮನ ಗೌತಮರ ಅನುಗ್ರಹಕ್ಕಾಗಿ, ದೇವರ ಆಜ್ಞೆಯಿಂದ ನಡೆದದ್ದು. ಅದು ದೋಷವಲ್ಲ. ಗೌತಮರು ಸಹಸ್ರಾಕ್ಷನಾಗೆಂದು ಶಾಪ ಕೊಟ್ಟರು. ಅದು ಇಂದ್ರ ದೇವರು ತಪ್ಪು ಮಾಡಿದ್ದಕ್ಕಾಗಿ ಆದ ಶಾಪ ಎಂದರೆ, ವೇದವು ಸಹಸ್ರಾಕ್ಷ ಎಂದು ಇಂದ್ರ ದೇವರನ್ನು ಹೊಗಳಿದೆ, ದೋಷವಾಗಿದ್ದಿದ್ದರೆ ಅದು ಸ್ತೋತ್ರವಾಗುತ್ತಿರಲಿಲ್ಲ.

**"ತಸ್ಯ ಲೋಮ ಚ ನ ಮೀಯತೇ"** ಅವನ ಒಂದು ರೋಮಕ್ಕೂ ಅಪಾಯವಾಗಿಲ್ಲ.
ಇಂದ್ರ ದೇವರು ಅಪರೋಕ್ಷ ಜ್ಞಾನಿಗಳು ಪಾಪ ಅಂಟುವುದೇ ಇಲ್ಲ.

ಸಾವಿರ ವರುಷಗಳ ಕಾಲ ಮಾನಸ ಸರೋವರದಲ್ಲಿ ಕಮಲದ ದೇಟಿನಲ್ಲಿ ಕುಳಿತು ನರಸಿಂಹ ಮಂತ್ರ ಜಪಿಸಿದ್ದು ಪ್ರಾರಬ್ಧಕ್ಕೆ ಸೂಚಕ ಮಾತ್ರ. ನರಸಿಂಹೋಪಾಸನೆ ಮತ್ತು ಅಶ್ವಮೇಧ ಯಾಗಗಳಿಂದ ಹೆಚ್ಚು ಪುಣ್ಯ ಸಂಪಾದಿಸುವ ಅವಕಾಶ ದೊರೆಯಿತು.

ಹೀಗೆಯೇ ಉಳಿದ ವಿಷಯಗಳ ನಿರ್ಣಯವನ್ನು ಮಾಡಿಕೊಳ್ಳಬೇಕು.

ಕನಕದಾಸರ ಪದ್ಯವೊಂದು ಹೀಗಿದೆ:

**ಹೆತ್ತ ಮಗಳನು ಮದುವೆಯಾದವನುತ್ತಮನು,**

**ಗುರುಪತ್ನಿಗಳುಪಿದ ಚಿತ್ತಜನು**

**ಮಾವನ ಕೃತಘ್ನನು ನಿನಗೆ ಮೈದುನನು**

**ಹೊತ್ತು ತಪ್ಪಿಸಿ ಕಾಮದಲಿ**

**ಮುನಿಪೋತ್ತಮನ ಮಡದಿಯನು ನೆರೆದವಗಿತ್ತೆ**

**ಕೈವಲ್ಯವನು ರಕ್ಷಿಸು ನಮ್ಮನನವರತ //**

ಇವೆಲ್ಲ ದೇವಗುಹ್ಯಗಳು

ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು.

ಅರ್ಥವನ್ನು ಆ ಶ್ರೀ ಹರಿಯೇ ಮಾಡಿಸಬೇಕು.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಸೌ. ಚೇತನಾ ವಾಮಾನರಾವ ಕುಲಕರ್ಣಿ, ವಿಜಯಪುರ, ಕರ್ನಾಟಕ